ದಿನಾಂಕ: 05.06.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಎಂ ಆರ್ ವಕೀಲರಿಂದಃ**

ನಾನು ಡಿಗ್ರಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ನ್ಯಾಯಾಲಯಕ್ಕೆ ಹಾಜರಾಗಲು ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ . ನನ್ನನ್ನು ಈ ದಿನ 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಬಾಲೇನಹಳ್ಳಿ ವಾಸಿ ಎಂದರೆ ನಿಜ. ನನಗೆ ವಾದಿ ಮತ್ತು ಪ್ರತಿವಾದಿಗಳು ಇಬ್ಬರು ಗೊತ್ತು. ವಾದಿ ಮತ್ತು ಪ್ರತಿವಾದಿಗಳ ವಂಶವೃಕ್ಷದ ಬಗ್ಗೆ ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಸಲು ಸಿದ್ದಪ್ಪನವರು ಮಾಹಿತಿ ಕೊಟ್ಟಿರುತ್ತಾರೆ.

ವಾದಿಯು ದಾವೆಯನ್ನು ಏಕೆ ಸಲ್ಲಿಸಿದ್ದಾರೆ ಎಂಬ ವಿಚಾರ ನನಗೆ ಗೊತ್ತಿದೆ. ದಾವಾಸ್ತಿಯನ್ನು ನಾನು ನೋಡಿದ್ದೇನೆ. ಅದರ ವಿಸ್ತೀರ್ಣ ಮತ್ತು ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ದಾವಾಸ್ತಿಯಲ್ಲಿ ಒಂದು ಹುಣಸೆ ಮರ, 3-4 ಬೇವಿನ ಮರಗಳು ಇವೆ. ದಾವಾಸ್ತಿಯಲ್ಲಿ ಎರಡು ದೊಡ್ಡ ಹುಣಸೆ ಮರ ಇವೆ ಎಂದರೆ ನಾನು ನೋಡಿಲ್ಲ. ಒಟ್ಟು 50 ಬೇವಿನ ಮರಗಳು ಇವೆ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ಹುಣಸೆ ಮರದ ಫಸಲನ್ನು ವಾದಿ ಮತ್ತು ಪ್ರತಿವಾದಿಯರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಹೋಟೆಲ್ ಕೆಲಸ ಮಾಡುತ್ತೇನೆ. 2 ನೇ ಪ್ರತಿವಾದಿ ಸಿದ್ದಪ್ಪ ನನಗೆ ಮಾವನಾಗಬೇಕು. ನನ್ನ ಹೆಸರಿನಲ್ಲಿ ಬಾಲೇನಹಳ್ಳಿಯಲ್ಲಿ ಜಮೀನು ಇರುವುದಿಲ್ಲ. ಬಾಲೇನಹಳ್ಳಿಯಲ್ಲಿ 250 ರಿಂದ 300 ಮನೆಗಳು ಇರಬಹುದು. ಬಸವರಾಜಯ್ಯ ಎನ್ನುವವರು ನಮ್ಮ ಊರಿನಲ್ಲಿ ಇಬ್ಬರು ಇದ್ದಾರೆ. ನನ್ನ ತಂದೆಯನ್ನು ಊರಿನಲ್ಲಿ ಸಿ ಬಸವರಾಜಯ್ಯ ಎಂದು ಕರೆಯುತ್ತಿದ್ದರು. ನಮ್ಮ ಊರಿನಲ್ಲಿ ಸಿ ಬಸವರಾಜಯ್ಯ ಎಂಬುವವರು ಬಹಳ ಜನ ಇದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸಿ ಬಸವರಾಜಯ್ಯ ಎನ್ನುವವರು ನನ್ನ ತಂದೆ ಒಬ್ಬರೇ ಇರುವುದು ನನಗೆ ಗೊತ್ತು

ಎಂದು ನುಡಿಯುತ್ತಾರೆ.

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನಾನು ಸಿ ಬಸವರಾಜಯ್ಯನವರ ಮಗ ಎಂದು ತೋರಿಸಲು ಶಾಲಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾಸ್ತಿ ಯಾರ ಹೆಸರಿನಲ್ಲಿದೆ ಎಂದು ನಾನು ಪಹಣಿ ನೋಡಿಲ್ಲ ಮತ್ತು ತಿಳಿದುಕೊಂಡಿಲ್ಲ. ದಾವಾಸ್ತಿ ಜುಬಾನಿ ಪಾಲುವಿಭಾಗ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಸಿದ್ದಪ್ಪನವರಿಗೆ ಮೂಟೆ ಕರಿಯಪ್ಪ ಯಾವುದೇ ವಿಲ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೂಟೆ ಕರಿಯಪ್ಪನಿಗೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. 21.07.1993 ರಂದು ಮೂಟೆ ಕರಿಯಪ್ಪ ಸಿದ್ದಪ್ಪನಿಗೆ ಯಾವುದೇ ವಿಲ್ ಬರೆದಿಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ಲನ್ನು 2 ನೇ ಪ್ರತಿವಾದಿ ಸಿದ್ದಪ್ಪ ಸೃಷ್ಟಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ದಾಖಲೆಯಲ್ಲಿ ಸಹಿ ಮಾಡಿದ ಸಿ ಬಸವರಾಜಯ್ಯ ಬಿನ್ ಚಂದ್ರಪ್ಪನ ಮಗ ನಾನಲ್ಲ ಎಂದರೆ ಸರಿಯಲ್ಲ. ನಿಡಿ-27(ಎ) ರಲ್ಲಿರುವ ಸಹಿ ನನ್ನ ಸಿ ಬಸವರಾಜಯ್ಯನವರದಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಿ ಬಸವರಾಜಯ್ಯ ಮತ್ತು ನಿಡಿ-27(ಎ) ರಲ್ಲಿ ಕಾಣಿಸಿದ ಸಿ ಬಸವರಾಜಯ್ಯನವರೇ ಬೇರೆ ಎಂದರೆ ಸರಿಯಲ್ಲ. ನಿಡಿ-27(ಎ) ರಲ್ಲಿರುವ ಸಹಿ ತುಲನೆ ಮಾಡಲು ಅವರ ಸಹಿ ಇರುವಂತಹ ಯಾವುದೇ ನೊಂದಾಯಿತ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆಧಾರ್ ಕಾರ್ಡನ್ನು ಈ ದಾವೆಗಾಗಿ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. 11.08.2013 ರಲ್ಲಿ ಬಾಲೇನಹಳ್ಳಿಯಲ್ಲಿ  ನನ್ನ ತಂದೆ ಮೃತ ಪಟ್ಟಿದ್ದಾರೆ. ಮರಣ ಪ್ರಮಾಣ ಪತ್ರವನ್ನು ನಮ್ಮ ಊರಿನ ಸ್ಕ್ರೇಟರಿ ನೀಡಿರುತ್ತಾರೆ. ಅದನ್ನು ಈ ದಾವೆಗಾಗಿ ತಂದು ಹಾಜರು ಪಡಿಸಿದ್ದೇನೆ ಎಂದರೆ ಸರಿ. ವಂಶವೃಕ್ಷವನ್ನು ಈ ದಾವೆಗಾಗಿ ಮಾಡಿಸಿರುತ್ತೇವೆ. ಈ ದಾವೆಯ ಸಲುವಾಗಿ ವಂಶವೃಕ್ಷವನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿ ಮಾತು ಕೇಳಿ ಮತ್ತು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು

ಹಾಜರು ಪಡಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ1(ಎ) ಪರ ಶ್ರೀ ಜಿ ಕೆ ಎಂ ವಕೀಲರಿಂದಃ**

ನನ್ನ ತಂದೆ ಎಲ್ಲಿಯವರೆಗೆ ವಿದ್ಯಾಭ್ಯಾ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ವಿದ್ಯಾವಂತರು. ನನ್ನ ತಂದೆ ಸಹಿ ಮಾಡುತ್ತಿದ್ದರು. ಸಹಿಯನ್ನು ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಸಹಿ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಮೊದಲು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದು ನಂತರ ಸ್ಟ್ರೋಕ್ ಆದ ನಂತರ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಸ್ಟ್ರೋಕ್ ಆದ ನಂತರ 9 ವರ್ಷ ಬದುಕಿದ್ದರು. ಸ್ಟ್ರೋಕ್ ಆಗುವ ಮೊದಲು ನನ್ನ ತಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು. ಸ್ಟ್ರೋಕ್ ಆದ ನಂತರ ನನ್ನ ತಂದೆ ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಸಹಿ ಮಾಡುತ್ತಿದ್ದರು. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ. ನನ್ನ ತಂದೆ ಅವರ ಹೆಸರಿಗೆ

ಕೊಂಡುಕೊಂಡ ಯಾವುದೇ ನೊಂದಾಯಿತ ದಾಖಲೆಗಳು ಇದ್ದಿರುವುದಿಲ್ಲ. ಸಾಕ್ಷಿ ಮುಂದುವರೆದು ಹುಡುಕಿದೆವು ಆದರೆ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಬ್ಯಾಂಕಿನಲ್ಲಿ ಖಾತೆ ತೆರೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆ ಸಿ ಬಸವರಾಜಯ್ಯ ಎಂದು ಸಹಿ ಮಾಡಿದ ಯಾವುದೇ ದಾಖಲೆಗಳು ಇರುವುದಿಲ್ಲ. ನಿಡಿ–27(ಎ) ರಲ್ಲಿರುವ ಸಿ ಬಸವರಾಜಯ್ಯನವರ ಸಹಿ ಎಂದು ತೋರಿಸಲು ನನ್ನ ಬಳಿ ಯಾವುದೇ ಪೂರಕ ದಾಖಲೆಗಳು ಇರುವುದಿಲ್ಲ. ನಿಡಿ–27(ಎ) ರಲ್ಲಿ ಸಿ ಬಸವರಾಜಯ್ಯ ಎಂದು ಬರೆದಿರುವ ಸಹಿ ನನ್ನ ತಂದೆಯದಲ್ಲ ಎಂದರೆ ಸರಿಯಲ್ಲ. ನಿಡಿ–27(ಎ) ರಲ್ಲಿ ಬರೆದಿರುವ ಸಿ ಬಸವರಾಜಯ್ಯನವರ ಮಗ ನಾನು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ 2 ನೇ ಹೆಂಡತಿಯ ಮಗಳು 2 ನೇ ಪ್ರತಿವಾದಿಯ ತಾಯಿ. 2 ನೇ ಪ್ರತಿವಾದಿ ಇದೇ ರೀತಿಯಾಗಿ ಸಾಕ್ಷಿ ಹೇಳು ನನಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದರಿಂದ ನಾನು ಅದೇ ರೀತಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 2 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು